ಇ) ಈ ಯೋಜನೆಯನ್ನು ಮೈಸೂರು ಮಹಾನಗರ ಪಾಲಿಕೆಯವರು ಸ್ವಂತ ಕಾಮಗಾರಿ ನಿರ್ವಹಣಾ ರೀತಿಯಲ್ಲಿ ತಾವೇ ಸ್ವಯಂ ನಿರ್ವಹಿಸಬೇಕಾಗಿರುತ್ತದೆ.

835(1321) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯದಲ್ಲಿ ಮೈಸೂರು ನಗರ ನೀರು ಸರಬರಾಜು ನಿರ್ವಹಣೆ ಮಾಡಲು ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಲು ಅನುಸರಿಸುತ್ತಿರುವ ಕ್ರಮವು ಗುತ್ತಿಗೆ ಕಾರ್ಮಿಕ ಕಾಯ್ದೆ (ನಿಷೇದ ಮತ್ತು ನಿಯಂತ್ರಣ) 1970ರ ನಿಯಮಗಳಿಗೆ ಅನುಗುಣವಾಗಿದೆಯೇ: ಇಲ್ಲದಿದ್ದಲ್ಲಿ ಯಾವ ಯಾವ ರೀತಿಯಲ್ಲಿ ಕಾನೂನು ಉಲ್ಲಂಘನೆಯಾಗಿದೆ:

ಆ) ಕಾನೂನು ಉಲ್ಲಂಘನೆಯಾಗಿದ್ದಲ್ಲಿ ತಡೆಗಟ್ಟಲು ಕಾರ್ಮಿಕ ಇಲಾಖೆಯು ಕೈಗೊಂಡ ಕ್ರಮಗಳೇನು;

ಇ) ಗುತ್ತಿಗೆ ಕಾರ್ಮಿಕ ಪದ್ಧತಿಯು ಕಪಟವಾಗಿದ್ದರೆ ಅಥವಾ ಅಕ್ರಮವಾಗಿದ್ದರೆ, ವಾಸ್ತವಿಕವಾಗಿ ಅಂತಹ ಗುತ್ತಿಗೆ ಕಾರ್ಮಿಕರನ್ನು ಪ್ರಧಾನ ಉದ್ಯೋಗದಾತರ ಉದ್ಯೋಗಿಗಳೆಂದು ಪರಿಗಣಿಸಬೇಕೆಂದು ಸುಪ್ರೀಂ ಕೋರ್ಟ್ ಪಂಚಪೀಠವು (2001) 7 sece (Steel authority of India Ltd v/s National Union Water Front Workers) ರಲ್ಲಿ ತೀರ್ಪು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಮೇಲ್ಕಂಡ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯದ ಗುತ್ತಿಗೆ ಕಾರ್ಮಿಕರನ್ನು ಮೈಸೂರು ಮಹಾನಗರ ಪಾಲಿಕೆಯು ತನ್ನ ಉದ್ಯೋಗಿಗಳೆಂದು ಪರಿಗಣಿಸದಿರುವುದು ಅಕ್ರಮವಲ್ಲವೇ;

ಶ್ರೀ ತನ್ವೀರ್ ಸೇಟ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

ಅ) ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಿದ ಕ್ರಮವು ನಿಯಮಗಳಿಗನುಗುಣವಾಗಿಲ್ಲ. ಗುತ್ತಿಗೆದಾರರು ಲೈಸನ್ಸ್ ಪಡೆಯದೇ ಇರುವುದು ಕಾನೂನು ಉಲ್ಲಂಘನೆಯಾಗುತ್ತದೆ.

ಆ) ಲೈಸನ್ಸ್ ಪಡೆಯದ ಗುತ್ತಿಗೆದಾರರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಇಲ್ಲ.

839(174) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನಲ್ಲಿ ಈವರೆಗೆ ಪ್ರವಾಸೋದ್ಯಮ ಇಲಾಖೆಯು ಸಹಾಯಧನ ನೀಡಿರುವ ವಸತಿ ಗೃಹಗಳು ಯಾವುವು;

ಆ) ಸಹಾಯಧನ ನೀಡಲು ವಿಳಂಬವಾಗುತ್ತಿರುವ ಹಾಗೂ ಅದರಲ್ಲಿ ಅವ್ಯವಹಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ಈ ಅವ್ಯವಹಾರ ನಿಲ್ಲಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: (ವಿವರ ಒದಗಿಸುವುದು).

ಶ್ರೀ ಡಿ. ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನ ಈ ಕೆಳಕಂಡ ಖಾಸಗಿ ಪ್ರವಾಸೋದ್ಯಮ ಯೋಜನೆಗಳಿಗೆ ಪ್ರವಾಸೋದ್ಯಮ ಇಲಾಖೆ ಸಹಾಯಧನ ನೀಡಿದೆ:-

1. ಪ್ರಭು ಗ್ರೂಪ್ ಆಫ್ ಹೋಟೆಲ್, ಹೊನ್ನಾವರ.
2. ಹೋಟೆಲ್ ಗುಡ್ ಲಕ್, ಹೊನ್ನಾವರ.
3. ಹೋಟೆಲ್ ಸಿದ್ದಾರ್ಥ, ಹೊನ್ನಾವರ.

ಆ) ಅನುದಾನ ಲಭ್ಯತೆ ಆಧಾರದ ಮೇರೆಗೆ ಸಹಾಯಧನ ನೀಡಲು ಕ್ರಮ ಕೈಗೊಳ್ಳಲಾಗುವುದು. ಸಹಾಯಧನವನ್ನು ನೀಡುವ ಬಗ್ಗೆ ಯಾವುದೇ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

840(182) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಸರ್ಕಾರಿ ಕೈಗಾರಿಕಾ ತರಬೇತಿ (ಉದ್ಯೋಗ ಮತ್ತು ತರಬೇತಿ ಇಲಾಖೆ), ಹೊನ್ನಾವರದ ಜಮೀನು ಸಾರ್ವಜನಿಕರಿಂದ ಅತಿಕ್ರಮಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2. ಅತಿಕ್ರಮಣವಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?
3. ಅತಿಕ್ರಮಣ ತಡೆಗಟ್ಟಲು ಸರ್ಕಾರ ಸಂಬಂಧಿಸಿದ ಇಲಾಖೆಗೆ ಸೂಚಿಸಿದೆಯೇ?
4. ಭಟ್ಕಳ ತಾಲ್ಲೂಕಿನಲ್ಲಿ ಹೊಸದಾಗಿ ಕೈ.ತ.ಸಂಸ್ಥೆ. (ಐಟಿಐ) ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ಹಾಗೂ ಈ ಯೋಜನೆ ಯಾವ ಹಂತದಲ್ಲಿದೆ? ಯಾವಾಗ ಪ್ರಾರಂಭಿಸಲಾಗುವುದು?
5. 2003-04ನೇ ಸಾಲಿನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಕಾರವಾರದಲ್ಲಿ ನಡೆಸಿದ ಜಿಲ್ಲಾ ಮಟ್ಟದ ತರಬೇತಿದಾರರ ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯದೆ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಲ್ಪಿಸಿರುವುದು ನಿಜವೇ?
6. ಇದರಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸರ್ಕಾರದ ನಿಲುವೇನು ಹಾಗೂ ಕೌನ್ಸಿಲಿಂಗ್ ಮೂಲಕ ಅರ್ಹರಿಗೆ ಅವಕಾಶ ಕಲ್ಪಿಸದೇ ಇರುವ ಕುರಿತು ಸರ್ಕಾರ ತನಿಖೆ ಮಾಡಲಾಗುವುದೇ?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

1. ಇಲ್ಲ.
2. ವರದಿಯೊಂದನ್ನು ತರಿಸಿಕೊಂಡು ಸತ್ಯವೆಂದು ಕಂಡುಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.
3. ಮೇಲಿನ (1)ರಲ್ಲಿ ತಿಳಿಸಿದ ಉತ್ತರದಿಂದ ಅನ್ವಯಿಸುವುದಿಲ್ಲ.
4. ಇತ್ತೀಚೆಗಷ್ಟೆ ಪ್ರಸ್ತಾವನೆ ಬಂದಿದ್ದು, ಜಮೀನು ಹಾಗೂ ಹಣಕಾಸು ಲಭ್ಯತೆಯನ್ನು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು.
5. ಸಿ.ಇ.ಟಿ. ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶ ಕಲ್ಪಿಸಲಾಗುತ್ತಿದೆ. ಆದ್ದರಿಂದ ಇಂತಹ ನ್ಯೂನತೆಗಳು ಉದ್ಭವಿಸುವುದಿಲ್ಲ.
6. ಅನ್ವಯಿಸುವುದಿಲ್ಲ.

841(993) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಟ್ಕಳ ತಾಲ್ಲೂಕಿನ ತೆಂಗಿನಗುಂಡಿ ಬಂದರಿನಲ್ಲಿ ಹಿನ್ನೀರು ಯೋಜನೆಯ ಕಾಮಗಾರಿ ಕೆಲಸ ನಡೆಯುತ್ತಿರುವುದು ನಿಜವೇ?